ಹಾಲು ಹಾಕಕ್ಕೆ?"

ಹಾಲಿನ ನಾಗೇಶ ಬಾಯಿ ಬಿಡುವ ಮುಂಚೆಯೇ ವಿಶಾಲಾಕ್ಷಮ್ಮ "ದಿನಾ ಐದೂವರೆಗೇ ಬರ್ತಾನೆ. ಇವತ್ತು ಲೇಟ್" ಅಂದಳು

"ನೀನು ಸುಮ್ಮನಿರಮ್ಮ. ನಿನಗೆ ಕೇಳಿದಿನಾ, ನೀನು ಹೇಳಯ್ಯಾ..."

"ಸಾರ್ ದಿನಾ ಐದೂವರೆ ಐದೂ ಮುಕ್ಕಾಲಿಗೆ ನಾನು ಬರೋದು. ಇವತ್ತೂ ಬಂದು ಬಾಗಿಲು ಬಡಿದೆ; ಯಾರೂ ತೆಗೆಯಲಿಲ್ಲ. ಸ್ವಲ್ಪ ಹೊತ್ತು ಕಾದು ನೋಡಿದೆ. ಯಾರೂ ಬರಲಿಲ್ಲ ಅಂತ ಇನ್ನೊಂದು ಮನೆಗೆ ಹೋಗಿ ಬರೋಣ ಎಂದು ಹೊರಟೆ ಸಾರ್... ಅಷ್ಟರಲ್ಲಿ ಈ ವಿಶಾಲಾಕ್ಷಮ್ಮ ಬಂದರು ಹಾಲು ಹಾಕಿ ಹೋದೆ."

"ಅಷ್ಟೇನಾ ಇನ್ನೂ ಏನಾದರೂ ಮರೆತಿದ್ದೀಯಾ ನೆನಪಿಸಿಕೊಂಡು ಹೇಳು. ನಾವು ಇಲ್ಲಿ ಇದ್ದಾಗಲೇ ಹೇಳಿದರೆ ಸರಿ. ಇಲ್ಲಂದ್ರೆ ಸ್ಟೇಷನ್‌ಗೆ ಕರೆದಾಗಲೆಲ್ಲ ಬಂದು ಹೇಳಬೇಕಾಗುತ್ತದೆ" ಎಂದು ನಾಗರಾಜಯ್ಯ ಧ್ವನಿಯಲ್ಲಿ ತುಸು ಕಠೋರತೆಯನ್ನು ಬೆರೆಸಿದ್ದ.

"ಸರ್ ಬಾಗಿಲು ತೆರೆಯದಿದ್ದುದರಿಂದ ಮತ್ತೆ ಬರೋಣ ಅಂತ ನಾನು ಗೇಟ್ ಬಳಿ ಬಂದಿದ್ದೆ. ಆಗ 'ಅಮ್ಮಾ...' ಎಂದು ಚೀರಿದ ಶಬ್ದ ಕೇಳಿಸಿತು ಸರ್. ಏನು ಅಂತ ತಿರುಗುವಷ್ಟರಲ್ಲಿ ಬಾಗಿಲು ತೆರೆದು ಈ ವಿಶಾಲಾಕ್ಷಮ್ಮ ಬಂದರು. ಹಾಲು ಹಾಕಿ ನಾನು ಹೋದೆ ಸರ್."

ಅವನ ಮಾತುಗಳು ಕೇಳಿ ಅಲ್ಲಿದ್ದವರೆಲ್ಲ ಒಂದು ಕ್ಷಣ ಅವಾಕ್ಕಾದರು. ಎಲ್ಲರೂ ಒಬ್ಬರನ್ನೊಬ್ಬರು ನೋಡಿಕೊಂಡರು. ಇನ್‌ಸ್ಪೆಕ್ಟರ್ ನಾಗರಾಜಯ್ಯ ಹುಸಿನಗೆ ನಕ್ಕ. ಆ ನಗುವಿನಲ್ಲಿ ಅದೇನು ಅರ್ಥ ಅಡಗಿತ್ತೋ ಯಾರಿಗೂ ಗೊತ್ತಾಗಲಿಲ್ಲ

"ಏನದು ಕೂಗು ಯಾರದ್ದು ವಿಶ್ವನಾಥಯ್ಯ ಅವರದಾ" ಲಾಯರ್ ನಾಗಭೂಷಣ ಆತುರದಿಂದ ಕೇಳಿದರು.

"ಗೊತ್ತಿಲ್ಲ ಸಾರ್, ಆದರೆ ಕೂಗಿದ್ದು ಗಂಡಸು ಧ್ವನಿ ಸಾರ್."

"ಏನು ಅದು ಕೂಗು ಎಂದು ಕೇಳಲಿಲ್ಲವಾ ನೀನು?"ನಾಗರಾಜಯ್ಯ ಪ್ರಶ್ನಿಸಿದ.

"ಈ ಅಮ್ಮ ನನ್ನ ಹತ್ತಿರ ಮಾತಾಡಲ್ಲ ಸಾರ್. ಯಾವಾಗಲೂ ಸಿಡುಕು ಮೋರೆಯಲ್ಲಿಯೇ ಇರುತ್ತಾಳೆ. ಅದಕ್ಕೇ ಯಾಕೆ ಅಂತ ಸುಮ್ಮನಾದೆ."

"ಈ ವಿಶಾಲಾಕ್ಷಮ್ಮನ ಮುಖದಲ್ಲಿ ಭಯ ಏನಾದರೂ ಇತ್ತಾ..."

"ಇಲ್ಲಾ ಸಾರ್, ಗೊತ್ತಿಲ್ಲ ಸಾರ್. ಆಗಷ್ಟೇ ಎದ್ದಿದ್ದರು ಅನಿಸುತ್ತಿತ್ತು ಸಾರ್."

"ಸರಿ ಆ ಕಾನ್‌ಸ್ಟೆಬಲ್ ಹತ್ರ ನನಗೆ ಹೇಳಿದ್ದು ಹೇಳಿ ಅವರು ಬರ್ಕೋತಾರೆ. ಸಹಿ ಹಾಕಿ ಹೋಗು. ಮತ್ತೆ ಯಾವಾಗಾದ್ರೂ ಕರೆದರೆ ಬರಬೇಕು ಆಯ್ತಾ. ಇನ್ನೇನಾದ್ರೂ ನೆನಪಾದ್ರೆ ಹೇಳಿ ಬರೆಸು" ಎಂದು ನಾಗರಾಜಯ್ಯ ವಿಶಾಲಾಕ್ಷಮ್ಮನ ಕಡೆ ತಿರುಗುವಷ್ಟರಲ್ಲಿ ನಾಗೇಶ ಮತ್ತೆ ಅವನ ಮುಂದೆ ಬಂದು ನಿಂತ.

"ಸಾರ್ ಇನ್ನೊಂದು ವಿಚಾರ, ನಾನು ಹಾಲು ಹಾಕಿ ಗೇಟ್ ಬಳಿ ಬರುವಷ್ಟರಲ್ಲಿ ಮತ್ತೊಂದು ಕೂಗು ಕೇಳಿಸಿತು ಸರ್. ಆದರೆ ಆ ಕೂಗು ಮೊದಲಿನಷ್ಟು ದೊಡ್ಡದಾಗಿರಲಿಲ್ಲ."

ಅಲ್ಲಿದ್ದವರೆಲ್ಲಾ ಅಲರ್ಟ್ ಆದರು. ಇನ್‌ಸ್ಪೆಕ್ಟರ್ ನಾಗರಾಜಯ್ಯ ತನ್ನ ಬೋಳು ತಲೆ ಸವರಿಕೊಳ್ಳುತ್ತಾ, "ಅದೇ ಧ್ವನಿನಾ ಅದೇ ಗಂಡಸಿನದ್ದಾ?" ಎಂದು ಕೇಳಿದ.

"ಇಲ್ಲಾ ಸಾರ್, ಇದು ಬೇರೆಯವರದ್ದು ಅಂತ ಅನಿಸಿತು. ಆದರೆ ಅದೂ ಗಂಡಸಿನ ಧ್ವನಿ."

"ಅಂದರೆ, ಮೊದಲನೆ ಕೂಗಿಗೂ ಎರಡನೆಯದಕ್ಕೂ ಎರಡು ನಿಮಿಷಗಳ ಅಂತರ."